ಹರಿಹರ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

೩೯೨. ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೩ರಲ್ಲಿ ಹರಿಹರ ತಾಲ್ಲೂಕಿನಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿಗೆ ಸಾಂಕೇತಿಕ ಅನುದಾನ ಮಂಜೂರು ಮಾಡಲಾಗಿತ್ತು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯಾವುದೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಇಲ್ಲಿ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವಾಗಿ ಯಾವುದೂ ಇಲ್ಲ. ಎಂದು ಹೇಳಿದ್ದೇನೆ. ಆದರೆ ೧೯೮೪–೮೫ನೇ ಸಾಲಿನ ಆಯವ್ಯಯ ಪಟ್ಟಿನಲ್ಲಿ ಟೋಕನ್ ಗ್ರಾಂಟ್‌ನಲ್ಲಿ ೭ ಕೆಲಸಗಳನ್ನು ಸೇರಿಸಲಾಗಿತ್ತು. ಆದರೆ ಆ ಸಾಲಿನಲ್ಲಿ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ೧೯೮೬–೮೭ನೇ ಸಾಲಿನ ಆಯವ್ಯಯದಲ್ಲಿ ಈ ಕೆಲಸಗಳಿಗೆ ಪೂರ್ಣ ಅನುದಾನವನ್ನು ಕೊಟ್ಟು. ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಈ ಭಾಗದಲ್ಲಿನ ಜನರು ಬಹಳ ಹಿಂದುಳಿದಿರುವ ಕಾರಣದಿಂದ ಈ ೭ ಏತ ನೀರಾವರಿ ಯೋಜನೆಗಳಿಗೂ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ತೆಗೆದುಕೊಂಡರೆ ನೀವು ನಮ್ಮ ತಾಲ್ಲೂಕ್‌ಗೆ ಬಹಳ ಉಪಕಾರ ಮಾಡಿದಂತೆ ಆಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—೭ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತದೋ ಅಥವಾ ೨ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತದೋ ಎಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಆಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ಈಗ ೭ ಏತ ನೀರಾವರಿ ಯೋಜನೆಗಳಿಗೂ ಟೋಕನ್ ಗ್ರಾಂಟ್ ಇಟ್ಟಿದ್ದೇವೆ. ಇವುಗಳಲ್ಲಿ ಕೆಲವೊಂದು ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂಬ ಆಸೆ ಇದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೨೪ ಮಾನ್ಯ ಸದಸ್ಯರು ಹಾಜರಿಲ್ಲ.

ಸೌಂದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ಯೋಜನೆ.

೩೯೩. ಶ್ರೀ ಚಂದ್ರಶೇಖರ ಪಾಮನಿ (ಪರಸಗಡ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ಯೋಜನೆಯ ಮೇರೆಗೆ ನೀರು ಸರಬರಾಜು ಮಾಡುವಾಗ ಕಾಲುವೆಗಳನ್ನು ಪ್ರತಿ ವರ್ಷ ದುರಸ್ತಿಗೊಳಿಸದಿರುವುದರಿಂದ ನೀರು ಬಾರದೆ ಬೆಳೆಗಳು ನಾಶ ಹೊಂದುತ್ತಿರುವುದು ಸರಕಾರವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾಲುವೆಗಳನ್ನು ದುರಸ್ತಿಗೊಳಿಸಲು ಸರಕಾರದವರು ಕೈಗೊಂಡಕ್ರಮಗಳೇನು?

ಇ) ಸಾಕಷ್ಟು ಪ್ರಮಾಣದ ನೀರು ಬಾರದೆ ಇರುವ ನೀರಾವರಿ ಭೂಮಿಯನ್ನು ಜಲಾನಯನ ಪ್ರದೇಶದಿಂದ ಕಡಿಮೆ ಮಾಡಲಾಗಿದೆಂಬುದು ನಿಜವೇ?

ಈ) ಪ್ರತಿ ಕಾಲುವೆಗೆ ಮಳೆ ಪದ್ಧತಿಯ ಮೇರೆಗೆ ನೀರು ವಿತರಣೆ ಮಾಡುವಂತೆ ವಿವರ್ಮಾಡು ಮಾಡಲು ಸರಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಮತ್ತು (ಆ) ಪ್ರತಿ ವರ್ಷವೂ ಅವಶ್ಯವಿದ್ದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಈ) ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಚಂದ್ರಶೇಖರ ಪಾವಂಜಿ —ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಪ್ರತಿ ವರ್ಷವೂ ಅವಶ್ಯವಿದ್ದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಈ ರೀತಿ ದುರಸ್ತಿ ಕಾರ್ಯವನ್ನು ಸರಿಯಾಗಿ ಮಾಡದ ಕಾರಣದಿಂದ ಕೆಲವು ಜನರ ಜಮೀನುಗಳಿಗೆ ನೀರು ಸರಿಯಾಗಿ ಮುಟ್ಟದೆ ಅವರ ಬೆಳೆಗಳು ನಷ್ಟವಾದ ಬಗ್ಗೆ ಸಾಕಷ್ಟು ಉದಾಹರಣೆಗಳು ಇವೆ. ಆದ್ದರಿಂದ ಬೆಳೆಗಳು ನಷ್ಟವಾಗದಂತೆ ಏನಾದರು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಡಿ ದೇವೇಗೌಡ.—ದುರಸ್ತಿಕಾರ್ಯ ಸರಿಯಾಗಿ ಆಗುತ್ತಿಲ್ಲ ಎನ್ನುವುದಕ್ಕೆ ಬದಲು ಮಾನ್ಯ ಸದಸ್ಯರು ಇರತಕ್ಕಂಥ ವಾಸ್ತವಾಂಶವನ್ನು ಸರಿಯಾಗಿ ಅರ್ಥವಾಡಿಕೊಳ್ಳಬೇಕು. ಒಂದು ಕೆನಾಲ್‌ನಿಂದ ಬೆಳೆಯತಕ್ಕಂಥ ಬೆಳೆಗೆ ಅನುಗುಣವಾಗಿ ನೀರನ್ನು ಬಿಡಲಾಗುತ್ತದೆ ಒಂದುವೇಳೆ ೫ ಕ್ಯೂಸೆಕ್ಸ್ ನೀರನ್ನು ಬಿಡುವುದಕ್ಕೆ ಬದಲು ೭ ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಹರಿಯುವಂತಹ ನೀರಿನ ಪ್ರಮಾಣ ಜಾಸ್ತಿಯಾಗಿ ಕೆನಾಲ್ ಕಿತ್ತುಕೊಂಡು ಹೋಗುತ್ತದೆ. ಆದ್ದರಿಂದ ಕೆನಾಲ್ ಸಿಸ್ಟಮ್ ಏನಿದೆ, ಅದಕ್ಕಿಂತ ಹೆಚ್ಚು ನೀರನ್ನು ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ. ಈಗ ಅವಶ್ಯಕತೆ ಇದ್ದ ಕಡೆ ದುರಸ್ತಿ ಕಾರ್ಯಗಳನ್ನು ಕೈಕೊಳ್ಳುವಬಗ್ಗೆ ನಾವು ಹಿಂದೆ ಬೀಳುವುದಿಲ್ಲ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.— ಈಗ ಕಾಲುವೆಗಳ ಮೂಲಕ ನೀರು ಸರಬರಾಜು ಮಾಡುವ ವಿಧಾನದಲ್ಲಿ ಕೆಲವರಿಗೆ ಹೆಚ್ಚು ನೀರು ಸಿಗುತ್ತಿದೆ ಮತ್ತೆ ಕೆಲವರಿಗೆ ಸರಿಯಾಗಿ ನೀರು ಸಿಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ತಾವು ಮತ್ತು ವ್ಯವಸಾಯ ಮಂತ್ರಿಗಳು ಸೇರಿಕೊಂಡು ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡಿದಾಗ ಮಾತ್ರ ಸರ್ಕಾರದವರು ಕಾಲುವೆಗಾಗಿ ಖರ್ಚು ಮಾಡಿದ ಹಣ ಸದ್ವಿನಿಯೋಗವಾಗುತ್ತದೆ. ಅಷ್ಟೇ ಅಲ್ಲ, ಎಲ್ಲ ರೈತರೂ ಸಹ ಯೋಗ್ಯವಾದಂಥ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಪ್ರಾಮುಖ್ಯವಾದ ವಿಷಯವನ್ನು ಮಾನ್ಯ ಕೆ. ಎಚ್. ಪಾಟೀಲ್ ಅವರು ಉಪಪ್ರಶ್ನೆಯ ಮೂಲಕ ಎತ್ತಿದ್ದಾರೆ. ಈ ದೇಶದಲ್ಲಿ ನೀರಿನ ಬಳಕೆ ಬಗ್ಗೆ ಇರತಕ್ಕಂಥ ಪದ್ಧತಿ ಏನಿದೆ, ಅದನ್ನು ಹಲವಾರು ರೀತಿಯಿಂದ ಮಾರ್ಪಾಡು ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ಮಾನ್ಯ ಸದಸ್ಯರ ಸಹಕಾರವೂ ಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕೆನಾಲ್‌ನಲ್ಲಿ ಎಷ್ಟು ನೀರು ಹರಿಯುತ್ತದೆ ಎಂಬುದನ್ನು ನೋಡಿಕೊಂಡು, ಅದರ ಆಧಾರದ ಮೇಲೆ ಕ್ರಾಪಿಂಗ್ ಪ್ಯಾಟರನ್ ಜಾರಿಗೆ ತರಬೇಕಾಗಿರುತ್ತದೆ. ಇಲ್ಲದಿದ್ದರೆ ಎಲ್ಲರಿಗೂ ನೀರು ಸಿಗುವುದಿಲ್ಲ.

ಶ್ರೀ ಚಂದ್ರಶೇಖರ ಪಾವಂಜಿ.—ಎಲ್ಲರಿಗೂ ನೀರು ಸಿಗಬೇಕಾದರೆ ಕ್ರಾಪಿಂಗ್ ಪ್ಯಾಟರನ್ ಜಾರಿಗೆ ತರುವುದು ಅನಿವಾರ್ಯ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ ಇದನ್ನು ಯಾವಾಗ ಜಾರಿಗೆ ತರುತ್ತೀರಿ ಎಂಬ ಬಗ್ಗೆ ತಾವು ನಿರ್ದಿಷ್ಟವಾದ ದಿನಾಂಕವನ್ನು ಹೇಳಬೇಕಂ.

ಶ್ರೀ ಎಚ್. ಡಿ. ದೇವೇಗೌಡ.—ಕ್ರಾಪಿಂಗ್ ಪ್ಯಾಟರನ್ ಎನ್-ಫೋರ್ಸ್ ಮಾಡುವುದು ಅನಿವಾರ್ಯವಾಗಿದೆ. ಈ ನಮ್ಮ ಸಮಾಜದಲ್ಲಿ ಎಲ್ಲರಿಗೂ ಜಲಸಂಪತ್ತು ಮತ್ತು ಪ್ರಕೃತಿ ಸಂಪತ್ತು ಸರಿಯಾಗಿ ಹಂಚಿಕೆಯಾಗಬೇಕಾದರೆ ನಾವು ಕ್ರಾಪಿಂಗ್ ಪ್ಯಾಟರನ್ ಅನ್ನು ಇನ್‌ಸಿಸ್ಟ್ ಮಾಡಲೇ ಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಾವೆಲ್ಲರೂ ಸೇರಿಕೊಂಡು ಕ್ರಮ ಕೈಕೊಳ್ಳಬೇಕಾಗುತ್ತದೆ.

ಪದವೀಧರ ಇಂಜಿನೀಯರುಗಳು ಹಾಗೂ ಜ್ಯೂನಿಯರ್ ಇಂಜನೀಯರ್‌ಗಳ ವೇತನ ಶ್ರೇಣಿ

೧೦೯. ಶ್ರೀ ಆರ್. ವೆಂಕಟರಾಮ್ಯಯ್ಯ (ಮುಳಬಾಗಿಲು) —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿನ ಪದವೀಧರ ಇಂಜಿನಿಯರ್‌ಗಳ ಮತ್ತು ಜ್ಯೂನಿಯರ್ ಇಂಜಿನೀಯರುಗಳ ಸಂಖ್ಯೆ ಎಷ್ಟು?

ಇ) ಪದವೀಧರ ಮತ್ತು ಡಿಪ್ಲೋಮೋ ಇಂಜಿನೀಯರುಗಳಿಗೆ ಸಮಾನ ಬಾಧ್ಯತೆ ಇದೆಯೆ? ಹಾಗಿದ್ದಲ್ಲಿ ಈ ಎರಡೂ ದರ್ಜೆಗಳ ಅಧಿಕಾರಿಗಳಿಗಿರುವ ವೇತನ ಅಂತರ ಎಷ್ಟು ?

ಈ) ಸಮಾನ ಕೆಲಸಕ್ಕೆ ಸಮಾನ ವೇತನ ಶ್ರೇಣಿಯನ್ನು ಸರ್ಕಾರದವರು ಹೆಚ್ಚಿಸುವರೆ?